ದಿನಾಂಕ: 18 ಏಪ್ರಿಲ್ 2014

# ಪ್ರಚಾರ ದಿನಚರಿ–18/04/2014

ಅರುಣ್ ಜೇಟ್ಲಿ
(ವಿರೋಧ ಪಕ್ಷದ ನಾಯಕರು, ರಾಜ್ಯ ಸಭಾ)

ಸಿಬಿಐ ವಿಚಾರದಲ್ಲಿ ಗೋಪಾಲ್ ಗಾಂಧಿ ಟೀಕೆ

ಕೇಂದ್ರ ತನಿಖಾ ತಂಡ, ಸಿಬಿಐ ವಿಚಾರದಲ್ಲಿ ಪಶ್ಚಿಮ ಬಂಗಾಳ ರಾಜ್ಯಪಾಲರ ಟೀಕೆ ಪ್ರಶಂಸಾರ್ಹವಾಗಿದೆ. ಸಿಬಿಐ ಪ್ರತಿ ವರ್ಷ ಆಯೋಜಿಸುವ ಡಿ.ಪಿ. ಕ್ಹೊಲಿ ಸ್ಮಾರಕ ಉಪನ್ಯಾಸ ನೀಡಲು ಶ್ರೀ ಗೊಪಾಲ್ ಗಾಂಧಿ ಅವರನ್ನು ಅಹ್ವಾನಿಸಲಾಗಿತ್ತು. ಸಿಬಿಐ ಸಂಸ್ಥೆಯ ಕಾನೂನು ಕರ್ತವ್ಯಗಳನ್ನು ತಿಳಿಸಿದ ಬಳಿಕ, ಶ್ರೀ ಗಾಂಧಿ ಅವರು ಸಿಬಿಐ ಸಂಸ್ಥೆಯನ್ನು ಸರ್ಕಾರದ ಕೆಡಕು ಬಗೆಯುವ ಇಲಾಖೆಯೊಂದಿಗೆ ಹೋಲಿಸಿದ್ದಾರೆ. ಸಿಬಿಐ ಅಧಿಕಾರಿಗಳ ಆತ್ಮಸಾಕ್ಷಿ ಕದಡುವ ಮಾತನ್ನು ಅವರು ಆಡಿದ್ದಾರೆ.

ಕಳೆದ 10 ವರ್ಷದಲ್ಲಿ ಸಂಸ್ಥೆಯು ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ಒಂದು ಸಂಸ್ಥೆಯಾದ ಸಿಬಿಐ ಅದರ ನಿರ್ದೇಶಕರ ಕಪಿಮುಷ್ಠಿಯಲ್ಲಿ ಕಾರ್ಯವಹಿಸುತ್ತದೆ. ಈ ನಿರ್ದೇಶಕರನ್ನು ಸರ್ಕಾರ ಆಯ್ಕೆ ಮಾಡುತ್ತದೆ ಹೊರತು ತಜ್ಞರ ಸಮಿತಿಯಲ್ಲ. ಕೇವಲ ಸರ್ಕಾರವಲ್ಲದೆ, ಆಡಳಿತ ಪಕ್ಷದ ಪ್ರಮುಖ ನಾಯಕರು ಕೂಡ ಈ ಸಂಸ್ಥೆಯ ನಿರ್ದೇಶಕರ ಮೇಲೆ ನಿಯಂತ್ರಣ ಹೊಂದಿರುತ್ತಾರೆ. ಹಲವಾರು ಪ್ರಕರಣಗಳಲ್ಲಿ ಸರ್ಕಾರಕ್ಕೆ ಬೇಕಾದ ವ್ಯಕ್ತಿಗಳಿಗೆ ಅಗತ್ಯ ನೆರವು ಒದಗಿಸುವ ಆವಶ್ಯಕತೆ ಉದ್ಭವಿಸುತ್ತದೆ. ಅದೇ ರೀತಿ, ಸರ್ಕಾರದ ವಿರುದ್ಧ ನಿಲ್ಲುವ ವ್ಯಕ್ತಿಗಳನ್ನು ಮಟ್ಟಹಾಕಲು ಸಿಬಿಐ ಅಗತ್ಯ ಬೀಳುತ್ತದೆ. ರಾಜಸ್ಥಾನ ಹಾಗೂ ಗುಜರಾತಿನಲ್ಲಿ ಭಾಜಪ ನಾಯಕರ ವಿರುದ್ಧ ಸಲ್ಲಿಸಲಾದ ಆರೋಪ ಪಟ್ಟಿ ಈ ಸಾಲಿಗೆ ಬರುತ್ತವೆ. ಹಲವಾರು ರಾಜಕಾರಣಿಗಳು ಹಾಗೂ ಅಧಿಕಾರಿಗಳ ಪ್ರತಿನಿಧಿಯಾಗಿ ಕಾರ್ಯವಹಿಸಿದ್ದ ಪ್ರತಿಷ್ಠಿತ ವಾಣಿಜ್ಯೋದ್ಯಮಿ ಒಬ್ಬರು ಗೌಪ್ಯ ವಿಚಾರಗಳನ್ನು ಬಹಿರಂಗ ಪಡಿಸಿದ್ದಾರೆ ಎಂಬ ವದಂತಿ ದೆಹಲಿಯಲ್ಲಿ ದಟ್ಟವಾಗಿ ಹರಡಿದೆ. ಸಿಬಿಐನೊಂದಿಗೆ ಸಂಬಂಧ ಬೆಳೆಸಿದ್ದ ವ್ಯಕ್ತಿಗಳ ಹೆಸರುಗಳನ್ನು ಖುಲಾಸೆ ಮಾಡಲಾಗಿದೆ ಎಂದು ತಿಳಿದುಬಂದಿದ್ದು, ಸಿಬಿಐ ತನಿಖಾ ಸಂಸ್ಥೆಯ ವಿಶ್ವಾಸಾರ್ಹತೆ ಮತ್ತಷ್ಟು ಕುಸಿದಿದೆ. ಈ ಮಾಹಿತಿಗಳ ಅಧಿಕೃತ ಪ್ರಕಟಣೆ ಆಗಬೇಕಾದ್ದು ಅತ್ಯಾವಶ್ಯಕವಾಗಿದೆ. ಪ್ರತಿಯೊಬ್ಬರು ಪ್ರಾಮಾಣಿಕತೆಯಿಂದ ವರ್ತಿಸಬೇಕು. ಖಂಡಿತವಾಗಿಯೂ ಅನ್ಯರಿಗಿಂತ ಸಿಬಿಐ ಅಧಿಕಾರಿಗಳು ಮತ್ತಷ್ಟು ಪ್ರಾಮಾಣಿಕರಾಗಿರಬೇಕು.

ಮೋದಿ ಅವರ ಪ್ರಚಾರ

ನರೇಂದ್ರ ಮೋದಿ ಅವರನ್ನು ಭಾಜಪ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು 13 ಸೆಪ್ಟೆಂಬರ್ 2013ರಂದು ಘೋಷಿಸಲಾಗಿತ್ತು. ಅಂದಿನಿಂದ, ದೇಶಾದ್ಯಂತ ಅವರು 380 ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಈ ಸಾರ್ವಜನಿಕ ಸಭೆಗೆ ಜನರು ಲಕ್ಷಾನುಲಕ್ಷ

ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಪ್ರಾರಂಭಿಕ ಉತ್ಸಾಹದ ನಂತರ ಕ್ರಮೇಣ ಜನರ ಆಸಕ್ತಿ ಕಡಿಮೆಯಾಗುತ್ತದೆ ಎಂಬ ಆಲೋಚನೆಯನ್ನು ನಾನು ಆರಂಭದಲ್ಲಿ ಹೊಂದಿದ್ದೆ. ಆದರೆ ಹಾಗಾಗಲಿಲ್ಲ. ಜೊತೆಗೆ, ಕನಿಷ್ಠ 300 ಸಾರ್ವಜನಿಕ ಸಭೆಗಳನ್ನು ಅವರು 3ಡಿ ಮಾದರಿಯಲ್ಲಿ ಭಾಗವಹಿಸಿದ್ದಾರೆ. ಮತ್ತೆ 300 ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುವ ಕಾರ್ಯಕ್ರಮವಿದೆ. ಸಮಕಾಲೀನ ಇತಿಹಾಸದಲ್ಲಿ ಯಾವೊಬ್ಬ ವ್ಯಕ್ತಿಯೂ ಇಷ್ಟು ಭಾರಿ ಸಂಖ್ಯೆಯಲ್ಲಿ ಪ್ರಚಾರಕಾರ್ಯದಲ್ಲಿ ತೊಡಗಿರುವ ಉದಾಹರಣೆಯಿಲ್ಲ.

ಮಾದಕ ದ್ರವ್ಯಗಳ ಪಿಡಗು

ನಿನ್ನೆ ನಾನು ರಾಜಸ್ಥಾನ್‌ನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ್ದೆ. ರಾಜ್ಯದಲ್ಲಿ ತಲೆದೋರಿರುವ ಮಾದಕ ದ್ರವ್ಯಗಳ ಪಿಡಗು ನಿವಾರಣೆಗೆ ನಾನು ಎತ್ತಿದ ವಿಚಾರಗಳಿಗೆ ಎಲ್ಲಕ್ಕಿಂತ ಮಿಗಿಲಾದ ಚಪ್ಪಾಳೆಗಳು ದೊರೆತವು. ಪ್ರಮುಖವಾಗಿ ಹೆಚ್ಚಿನ ಮಹಿಳೆಯರು ಕೂತಿದ್ದ ಕಕ್ಷೆಯಿಂದ ಪ್ರೋತ್ಸಾಹಕ ಮೆಚ್ಚುಗೆ ವ್ಯಕ್ತವಾಯಿತು. ಇದರಿಂದ ಎಲ್ಲಾ ಸ್ಪಷ್ಟವಾಗುತ್ತದೆ. ಮಾದಕ ದ್ರವ್ಯಗಳನ್ನು ಪಂಜಾಬಿನಲ್ಲಿ ಬೆಳೆಸಲಾಗುವುದಿಲ್ಲ. ಅದನ್ನು ಗಡಿಯಾಚೆಯಿಂದ ಕಳ್ಳಸಾಗಣೆ ಮಾಡಲಾಗುತ್ತಿದೆ. ರಾಜಸ್ಥಾನದಲ್ಲಿ ಕೆಲವೆಡೆ ದೇಶೀಯ ಮಾದಕ ದ್ರವ್ಯಗಳನ್ನು ಬೆಳಸುವ ಮತ್ತು ವಿತರಿಸುವ ಅಕ್ರಮ ದಂಧೆಯಿದೆ. ಕಳ್ಳಸಾಗಾಣಿಕೆ ತಡೆಯುವುದೊಂದೆ ಇದಕ್ಕಿರುವ ಏಕೈಕ ಮಾರ್ಗ. ಇದರಿಂದ ಕೆಲವರಿಗೆ ಹಿಂಸೆ ಆಗಬಹುದು ಆದರೆ ಅದು ಅನಿವಾರ್ಯ. ಮಾದಕದ್ರವ್ಯಗಳು ಹಾಗೂ ಭಯೋತ್ಪಾದನೆ ಜಂಟಿಯಾಗಿ ದೇಶದ ಮೇಲೆ ದಾಳಿ ಮಾಡಿವೆ. ಅವುಗಳ ವಿರುದ್ಧ ಕಠಿಣ ಪ್ರತಿತಂತ್ರ ರೂಪಿಸಬೇಕಿದೆ.

*****